ತಯಾರಿಲ್ಲ, ಇದರ ಬದಲಾಗಿ ತಾವು ಇದನ್ನು 9 ನೇ ಷೆಡ್ಯೂಲ್‌ಗೆ ಸೇರಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಒಂದು ರೆಸಲ್ಯೂಷನ್ ಪಾಸ್ ಮಾಡಿ, ಈಗ ಇರತಕ್ಕಂಥ ರೂಲ್ಸ್‌ನ್ನು ಅಮೆಂಡ್‌ಮೆಂಟ್ ಮಾಡಿ; ತಮಗೆ ನಾವು ಅಂಕಿಗಳನ್ನು ಕೊಟ್ಟಿದ್ದೇವೆ. ಎಲ್ಲಾ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಅನುಕೂಲವಾಗುವ ಹಾಗೆ ತಾವು ಕಾನೂನಿನಿಂದ ಮಾಡಿದ್ದರೆ ಚೆನ್ನಾಗಿ ಇರುತ್ತಿತ್ತು. ಆದ್ದರಿಂದ ತಾವು ಇದನ್ನು ತರಾತುರಿಯಲ್ಲಿ ತಂದಿರುತ್ತೀರಿ ಇದಕ್ಕೆ ನಾವು ಪಾರ್ಟಿಯಾಗುವುದಕ್ಕೆ ತಯಾರಿಲ್ಲ, ಇದನ್ನು ತಾವು ಮಾಡಿಕೊಳ್ಳಿ, ನಾವು ಸಭಾತ್ಯಾಗವನ್ನು ಮಾಡುತ್ತೇವೆ.

(ಈ ಹಂತದಲ್ಲಿ ಜನತಾದಳ (ಯು) ಪಕ್ಷದ ಸದಸ್ಯರು ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯರವರ ನೇತೃತ್ವದಲ್ಲಿ ಸಭಾತ್ಯಾಗವನ್ನು ಮಾಡಿದರು)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ಈ ಗ್ರಾಮೀಣ ಕೃಪಾಂಕ ಬಿಲ್ ನಿನ್ನೆ ಸಾಯಂಕಾಲ ಮಂಡನೆಯಾಗಿದೆ, ಇದರ ಬಗ್ಗೆ ಚರ್ಚೆಯಾಗಿರುತ್ತದೆ, ಇದರ ಬಗ್ಗೆ ನಾವು ಬೆಳಿಗ್ಗೆ ಕೆಲವೊಂದು ಪ್ರಪೋಸಲ್‌ಗಳನ್ನು ಕೊಟ್ಟಿರುತ್ತೇವೆ. ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಶೇಕಡಾ 10 ಎಂದು ಹೇಳಿದರು. ಇದಕ್ಕೆ ನಾವು 25 ಪರ್ಸೆಂಟ್ ಮಾಡಲು ಹೇಳಿದೆವು. ಇದಕ್ಕೆ ಮಾನ್ಯ ಕಾನೂನು ಸಚಿವರು ಒಪ್ಪಿಕೊಂಡಿದ್ದಾರೆ. ಇದನ್ನು ಸಂವಿಧಾನ ಮತ್ತು ಕಾನೂನು ರೀತ್ಯ ತರಬೇಕಾಗಿರುತ್ತದೆ. ಇದರ ಬಗ್ಗೆ ನಮಗೆಲ್ಲರಿಗೂ ಕಳಕಳಿ ಇದೆ, ಗ್ರಾಮೀಣ ವಿದ್ಯಾರ್ಥಿಗಳಿಗೆ ಕೃಪಾಂಕವನ್ನು ಕೊಡಬೇಕು. ಇದೊಂದು ಪ್ರಯೋಗ ಮಾತ್ರ. ಇದನ್ನು 9 ನೇ ಷೆಡ್ಯೂಲ್‌ನಲ್ಲಿ ಸೇರಿಸಬೇಕೆಂದು ಹೇಳಿದ್ದೇನೆ, ಇದರ ಬಗ್ಗೆ ಚಿಂತನೆಯಾಗಬೇಕು. ಈ ಬಿಲ್ ಪಾಸ್ ಆದನಂತರ ಇದನ್ನು ಇಲ್ಲಿಗೆ ಮುಕ್ತಾಯ ಮಾಡುವುದು ಬೇಡ. 9 ನೇ ಷೆಡ್ಯೂಲ್‌ನಲ್ಲಿ ಸೇರಿಸುವ ಬಗ್ಗೆ ಲೀಗಲ್ ಎಕ್ಸ್‌ಪರ್ಟ್‌ಗಳ ಓಪಿನಿಯನ್ ತೆಗೆದುಕೊಂಡು ತಮಿಳುನಾಡಿನಲ್ಲಿ 9 ನೇ ಷೆಡ್ಯೂಲ್‌ನಲ್ಲಿ 69 ಪರ್ಸೆಂಟ್ ಮೀಸಲಾತಿಯನ್ನು ಸೇರಿಸಿರುತ್ತಾರೆ. ಅದರ ಬಗ್ಗೆ ಇವತ್ತು ಯಾರೂ ಕೂಡ ಚ್ಯಾಲೆಂಜ್ ಮಾಡಿಲ್ಲ, ಅದರ ಬಗ್ಗೆ ಯಾರು ಕೋರ್ಟಿಗೆ ಹೋಗಿರುವುದಿಲ್ಲ. ಅದರ ಬಗ್ಗೆ ಚರ್ಚೆಯಾಗಲಿ, ಅದರ ಬಗ್ಗೆ ಓಪಿನಿಯನ್ ತೆಗೆದುಕೊಳ್ಳಿ, 25 ಪರ್ಸೆಂಟ್ ಮೀಸಲಾತಿ ಬಗ್ಗೆ ಪ್ರಾಯೋಗಿಕವಾಗಿ 4-5 ತಿಂಗಳು ಇದರ ಉಪಯೋಗದ ಬಗ್ಗೆ ಟ್ರೈಮಾಡಬೇಕು. ಇದು ಸರಿಯಾಗಿ ಹೋದರೆ ಇನ್ನಷ್ಟು ಇನ್‌ಕ್ರೀಸ್ ಮಾಡಬಹುದು, ಇದರಿಂದ ಗ್ರಾಮೀಣ ಪ್ರದೇಶದ ಜನರಿಗೆ ಅನುಕೂಲವಾದರೆ ಇನ್ನಷ್ಟು ಹೆಚ್ಚಿಗೆ ಏರಿಕೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇದಕ್ಕೆ ನಾವು ಬೆಂಬಲವನ್ನು ಕೊಡಬೇಕಾಗುತ್ತದೆ, ಒಬ್ಬೊಬ್ಬರದ್ದು ಒಂದೊಂದು ರೀತಿಯಾದ ಅಭಿಪ್ರಾಯ ಇರುತ್ತದೆ, ಇದಕ್ಕೆ ನಾವು ಬೆಂಬಲವನ್ನು ಕೊಟ್ಟಿದ್ದೇವೆ, ಈ ಬಿಲ್ ಪಾಸ್ ಮಾಡುವುದಕ್ಕೆ ನಾವು ವೆಲ್‌ಕಂ ಮಾಡುತ್ತೇವೆ. 25 ಪರ್ಸೆಂಟ್‌ಗಿಂತ ಜಾಸ್ತಿ ಮೀಸಲಾತಿಯನ್ನು ಕೊಡಬೇಕು